

ತದನಂತರ ಕಂಪನಿ ಷೇರುಗಳು. ಭವಿಷ್ಯದಲ್ಲಿ ಈ ಸ್ಥಾನ ತುಂಬಲಿರುವುದು ‘ಮಾಹಿತಿ’ ಎಂಬ ಆಸ್ತಿ’’. ಆನ್‌ಲೈನ್ ಕಾಲದಲ್ಲಿ ಈ ‘ಆಸ್ತಿ’ ಗಳಿಸುವವರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

ದಾಖಲೆ ಸಂಗ್ರಹ ಮತ್ತು ಅದರ ಆಧಾರದ ಮೇಲೆ ವಂಚನೆಗಳು ನಡೆಯುತ್ತಲೇ ಇವೆ. ಮೊಬೈಲ್ ಆ್ಯಪ್ ಡೌನ್‌ಲೋಡ್‌ನಿಂದ ಹಿಡಿದು, ಮನೆಗೆ ವಸ್ತುಗಳನ್ನು ಖರೀದಿ ಮಾಡುವ ಪ್ರತಿ ಹಂತದಲ್ಲೂ ದಾಖಲೆಗಳು ಸಂಗ್ರಹಗೊಳ್ಳುತ್ತಲೇ ಇವೆ. ಹೀಗೆ ಸಂಗ್ರಹವಾದ ದಾಖಲೆಗಳು ‘ಬಿಗ್ ಡಾಟಾ’ ರೂಪದಲ್ಲಿ ‘ಕ್ಲೌಡ್’ ಎಂಬ ಅನಾಮಿಕ ಸರ್ವರ್‌ನ ಸ್ಮೃತಿಕೋಶದಲ್ಲಿ ದಾಖಲಾಗುತ್ತಿರುತ್ತವೆ. ಇಂಥ ಸ್ಮೃತಿಕೋಶಕ್ಕೆ ಲಗ್ಗೆ ಇಡುವ ದಾಳಿಕೋರರು ವೈಯಕ್ತಿಕ ದಾಖಲೆಗೆ ಕನ್ನ ಹಾಕಿ, ಅದರ ಮೂಲಕ ತಮ್ಮ ವಂಚನೆಯ ಜಾಲವನ್ನು ಬೀಸುತ್ತಿದ್ದಾರೆ.

ಸೈಬರ್ ದಾಳಿಗೆ ತುತ್ತಾದವರಲ್ಲಿ ಜನಸಾಮಾನ್ಯರು ಮಾತ್ರವಲ್ಲ, ಸೆಲೆಬ್ರೆಟಿಗಳೂ ಸೇರಿದ್ದಾರೆ. ಅಮಿತಾಭ್ ಬಚ್ಚನ್, ಹೃತಿಕ್ ರೋಷನ್, ಶ್ರುತಿಹಾಸನ್ ಅವರ ಫೇಸ್‌ಬುಕ್ ಖಾತೆಗಳು, ಕರಣ್ ಜೋಹರ್ ಹಾಗೂ ಅನುಪಮ್ ಖೇರ್ ಅವರ ಟ್ವಿಟರ್ ಖಾತೆ, ಶಾಹಿದ್ ಕಪೂರ್ ಅವರ ಇನ್‌ಸ್ಟಾಗ್ರಾಂ ಖಾತೆಗಳೂ ಹ್ಯಾಕ್ ಆಗಿವೆ. ಪೊಲೀಸ್ ಅಧಿಕಾರಿಗಳ ಹೆಸರಿನಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ನಕಲಿ ಖಾತೆಗಳನ್ನು ಸೃಷ್ಟಿಸಿ, ಹಲವರಿಗೆ ವಂಚನೆ ಮಾಡಿರುವ ದೂರುಗಳೂ ದಾಖಲಾಗಿವೆ.

ತರಾತುರಿಯಲ್ಲಿರುವ ಜನರಿಗೆ ವಂಚಿಸುವುದು ಸುಲಭ. ಫೋನ್ ಮಾಡಿ ವಿನಯದಿಂದ ಮಾತನಾಡುವ ವ್ಯಕ್ತಿ ಕೇಳಿದಾಗ ಮತ್ತು ಅವಸರಿಸಿದಾಗ ಬೇರೇನೂ ಮಾಡಲಾಗದೆ ಒಟಿಪಿಯನ್ನು, ನಮ್ಮ ಖಾತೆಯ ನಂಬರನ್ನು, ಆಧಾರ್ ಸಂಖ್ಯೆ, ಪಾನ್ ಕಾರ್ಡ್ ಸಂಖ್ಯೆ... ಹೀಗೆ ಎಲ್ಲವನ್ನೂ ಲಗುಬಗನೆ ಕೊಡುವವರು ಇದ್ದಾರೆ. ‘ಒಟಿಪಿ’ (ಒಂದು ಬಾರಿ ಮಾತ್ರ ಬಳಸಬಹುದಾದ ಪಾಸ್‌ವರ್ಡ್ ಅಥವಾ ಪಿನ್) ಯಾರಿಗೂ ಕೊಡಬಾರದೆಂಬ ಸಣ್ಣ ಸಂಗತಿಯನ್ನು ಮರೆತು, ಹಣ ಕಳೆದುಕೊಳ್ಳುವವರು ಇದ್ದಾರೆ.

ಡಿಜಿಟಲೀಕರಣ, ನಗದು ರಹಿತ ವ್ಯವಹಾರಗಳು ಮತ್ತು ಸೋಷಿಯಲ್ ಮೀಡಿಯಾ ಬಳಕೆ ಹೆಚ್ಚಾದಂತೆಯೇ, ಹಣಕಾಸು ವಂಚನೆ ಪ್ರಕರಣಗಳೂ ಸೈಬರ್ (ಇಂಟರ್ನೆಟ್ ಮೂಲಕ ಕಂಪ್ಯೂಟರ್, ಮೊಬೈಲ್ ಮುಂತಾದ ಎಲೆಕ್ಟ್ರಾನಿಕ್ ಉಪಕರಣಗಳ ಬಳಕೆಯ) ಜಗತ್ತಿನಲ್ಲಿ ವಿಪರೀತವೆನಿಸುವಷ್ಟು ಹೆಚ್ಚಾಗಿವೆ. ಬ್ಯಾಂಕ್ ಖಾತೆಗಳಿಗೆ, ಟೆಲಿಕಾಂ ಸೇವೆಗಳಿಗೆ ಗ್ರಾಹಕರು ತಮ್ಮ ಬಯೋಮೆಟ್ರಿಕ್ ಮಾಹಿತಿ ಇರುವ ಆಧಾರ್ ಸಂಖ್ಯೆ ಒದಗಿಸುವುದು ಕಡ್ಡಾಯ ಎಂದಾದ ಬಳಿಕ, ಈ ರೀತಿಯ ಮಾಹಿತಿಗಳ್ಳತನವೂ ಹೆಚ್ಚಾಗತೊಡಗಿದೆ.

ಅಂತರ್ಜಾಲದಲ್ಲಿ ಹಂಚಿಕೊಂಡ ನಮ್ಮ ಎಲ್ಲಾ ವೈಯಕ್ತಿಕ ದಾಖಲೆಗಳು ಸುರಕ್ಷಿತವಾಗಿವೆಯೇ? ಯಾರಿಗೂ ಗೊತ್ತಿಲ್ಲ. ಡಿಜಿಟಲ್ ಸಾಕ್ಷರತೆ ಹೊಂದಿರುವ ದೇಶದ ಶೇ 80ರಷ್ಟು ಜನಕ್ಕೆ ಈಗ ಈ ಆತಂಕ ಶುರುವಾಗಿದೆ.

### ಭಾರತದಲ್ಲಿನ ತಂತ್ರಜ್ಞಾನ

ಸೈಬರ್ ಅಪರಾಧಗಳನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಭಾರತದಲ್ಲೂ ಹಲವು ಬಗೆಯ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲಾಗಿದೆ.

ಇ–ಆಡಳಿತದ ಮೂಲಕ ಅಪರಾಧ ಹಾಗೂ ಅಪರಾಧಿಗಳ ಪತ್ತೆ ಮಾಡುವ ಅಂತರ್ಜಾಲ ವ್ಯವಸ್ಥೆ (ಸಿಸಿಟಿಎನ್‌ಎಸ್) ಅಭಿವೃದ್ಧಿಪಡಿಸಲಾಗಿದೆ. ಇದರ ಮೂಲಕ 14 ಸಾವಿರ ಪೊಲೀಸ್ ಠಾಣೆಗಳ ನಡುವೆ ಸಂಪರ್ಕ ಕಲ್ಪಿಸಲಾಗಿದೆ.

ಕೇರಳ ಪೊಲೀಸ್ ಇಲಾಖೆಯು ಎಥಿಕಲ್ ಹ್ಯಾಕರ್‌ಗಳು, ತಂತ್ರಜ್ಞರು, ಸೈಬರ್ ಭದ್ರತಾ ಸಿಬ್ಬಂದಿ, ತನಿಖಾ ಸಿಬ್ಬಂದಿಯನ್ನು ಒಳಗೊಂಡ ತಜ್ಞರ ತಂಡವನ್ನು ಸಜ್ಜಗೊಳಿಸಿದೆ.

ಐಪಿಎಸ್ ಅಧಿಕಾರಿಗಳಿಗೆ ಈಗ ಕ್ರಿಪ್ಟೊಕರೆನ್ಸಿ ಕುರಿತ ತರಬೇತಿಯನ್ನು ನೀಡಲಾಗುತ್ತಿದೆ. ರಾಷ್ಟ್ರೀಯ ಪೊಲೀಸ್ ಅಕಾಡೆಮಿ ಮೂಲಕ ಕ್ರಿಪ್ಟೊಕರೆನ್ಸಿ ಕುರಿತ ಆಳ ಅಗಲ ಕುರಿತು ಮಾಹಿತಿ ಜತೆಗೆ ಅದರ ಒಳಸುಳಿಗಳನ್ನೂ ಕಲಿಸಲಾಗುತ್ತಿದೆ.

### ಬಹುರೂಪಿ ಸೈಬರ್ ದಾಳಿ

- ದತ್ತಾಂಶ ಕಳವು: ಪ್ರಸಿದ್ಧ ಕಂಪನಿಗಳ ಸರ್ವರ್‌ಗಳಿಗೆ ಕನ್ನ ಹಾಕುವ ಕಳ್ಳರು, ಅಲ್ಲಿರುವ ದತ್ತಾಂಶವನ್ನು ಕದಿಯುತ್ತಾರೆ. ಇವುಗಳನ್ನು ಮರಳಿ ನೀಡಲು ಹಣ ಪಾವತಿಗೆ ಬೇಡಿಕೆ ಇಡುತ್ತಾರೆ. ಅದೂ ‘ಆನ್‌ಲೈನ್ ಕರೆನ್ಸಿ’ ಬಿಟ್‌ಕಾಯಿನ್‌ಗೆ ಒತ್ತಾಯಿಸುವವರೇ ಹೆಚ್ಚು.
- ಫೋಟೊ, ವಿಡಿಯೊ ಕದ್ದು ಬೆದರಿಕೆ: ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡುವ ನಮ್ಮ ಚಿತ್ರ ಹಾಗೂ ವಿಡಿಯೊಗಳನ್ನು ಕದಿಯುವ ಸೈಬರ್ ಕಳ್ಳರು, ವ್ಯಕ್ತಿಯ ಮುಖವನ್ನು ಅಶ್ಲೀಲ ಭಾವಚಿತ್ರಗಳೊಂದಿಗೆ ಜೋಡಿಸುತ್ತಾರೆ. ವಿರೂಪಗೊಳಿಸಿದ ಚಿತ್ರಗಳನ್ನು ಕಳುಹಿಸಿ ಹಣದ ಬೇಡಿಕೆ ಇಡುವ ಪ್ರಕರಣಗಳೂ ದಾಖಲಾಗಿವೆ. ಇಂಥ ಬ್ಲಾಕ್‌ಮೇಲ್ ಯುವತಿಯರನ್ನು ಗುರಿಯಾಗಿಸಿಕೊಂಡು ಹೆಚ್ಚು ನಡೆಯುತ್ತದೆ.